ಎಲ್ಲ ಸರಿಯಾಗಿ ಜೋಡಿಸಿದ್ದೇನೆಯೇ ಎಂದು ಮನು ಮತ್ತೊಮ್ಮೆ ಖಚಿತಪಡಿಸಿಕೊಂಡ. ಸಮಾಧಾನವಾಯಿತು. ಎಲ್ಲ ಸರಿಯಾದರೆ ಇನ್ನು ಹತ್ತು ನಿಮಿಷಗಳಲ್ಲಿ ತನ್ನ ಮುಂದೆ ರೂಪಸಿಯೊಬ್ಬಳು ಜೀವ ತಳೆಯುತ್ತಾಳೆ. ಅದೂ ಎಂತಹ ರೂಪಸಿ? ತಾನು ಬಯಸಿದಂತಹವಳು! ತಾನೇ ಹೇಳಿದಂತೆ ರೂಪುಗೊಂಡವಳು!! ಇದನ್ನು ನಂಬುವುದು ಕಷ್ಟ!! ಆದರೆ ಇದು ನಿಜ. ಎಲ್ಲಾ ತನ್ನ ಕಣ್ಣೆದುರೇ ನಡೆದಿದೆ. ಸ್ವತಃ ತಾನೇ ತನ್ನ ಕೈಯಾರೆ ರೂಪಿಸಿದವಳು!

ಅದಕ್ಕೆ ಜೀವ ಕೊಡುವ ಮುನ್ನ ಒಮ್ಮೆ ಮುಟ್ಟಿ ನೋಡಿದ. ನಿಜಕ್ಕೂ ಅದು ರೊಬೊ ಎಂದು ಹೇಳಲು ಯಾರಿಗೂ ಸಾಧ್ಯವೇ ಇರಲಿಲ್ಲ! ಅಷ್ಟರಮಟ್ಟಿಗೆ ಅದು ಮನುಷ್ಯರನ್ನು ಹೋಲುತ್ತಿತ್ತು! ಇದಕ್ಕೆ ಜೀವ ಬರುತ್ತದೆ! ಇದು ಮನುಷ್ಯಳಂತೆಯೇ ಆಗುತ್ತದೆ, ಮನುಷ್ಯಳಂತೆಯೇ ಆಡುತ್ತದೆ ಎಂಬ ಯೋಚನೆಗೆ ಅವನ ಎದೆ ಬಡಿತ ಜೋರಾಯಿತು!

ಐದಡಿ ಆರೂವರೆ ಇಂಚು ಎತ್ತರ. ಮಾಟವಾದ ಮೈ! ಕಪ್ಪನೆಯ ದಟ್ಟ ಕೂದಲು! ಥಳಥಳ ಹೊಳೆಯುವ ಚರ್ಮ! ಹದವಾಗಿ ಟ್ರಿಮ್ ಮಾಡಿದ ಹುಬ್ಬುಗಳು, ಕಡು ಕಪ್ಪು ಕಣ್ಣುಗಳು. ನೀಳವಾದ ತೋಳುಗಳು! ತಾನೇ ತೊಡಿಸಿದ ಉಡುಪು! ಧರೆಗಿಳಿದ ಅಪ್ಸರೆಯಂತಿತ್ತು ಆ ರೊಬೊ.

ದೂರ ಸರಿದು ಅದನ್ನು ಇನ್ನೊಮ್ಮೆ ನೋಡಿ ಕಣ್ತುಂಬಿಕೊಂಡ. ಇನ್ನು ಜೀವ ತಳೆದ ಮೇಲೆ ಅದು ಹೇಗೆ ವರ್ತಿಸುವುದೋ... ಎಂಬ ಅಳುಕು ಬೇರೆ!

'ಈ ರೊಬೊ ವಿಶಿಷ್ಟವಾದದ್ದು; ನಿಮಗಿಷ್ಟವಾಗುವಂತೆ ವರ್ತಿಸುತ್ತದೆ. ಏಕೆಂದರೆ ಇದಕ್ಕೆ ಬೇಕಾದಂತ ಸೂಚನೆಗಳನ್ನು ಕೊಡುವವರೂ ನೀವೇ! ಅದು ಬೇರೆ ರೀತಿಯಲ್ಲಿ ವರ್ತಿಸುವುದರ ಬಗೆಗೆ ಅನಗತ್ಯ ಗೊಂದಲ ಬೇಡ. ರೊಬೊ ನಿಮ್ಮ ಇಚ್ಛೆಯನ್ನು ಮೀರಿ ಅಪಾಯಕಾರಿಯಾಗಿ ವರ್ತಿಸಿದರೆ ಈ ರಿಮೋಟ್ ಕಂಟ್ರೋಲ್ ಮೂಲಕ ಅದನ್ನು ನಿಷ್ಕ್ರಿಯಗೊಳಿಸಬಹುದು. ಕಂಪೆನಿಗೆ ವಾಪಸ್ಸು ಮಾಡಿ ಬೇರೆ ರೊಬೊ ಪಡೆಯಬಹುದು.'

ಕಂಪೆನಿಯವರ ಮಾಹಿತಿಯನ್ನು ಇನ್ನೊಮ್ಮೆ ಓದಿಕೊಂಡ ಮನು. ಸರಿ ಇನ್ನು ಇದನ್ನು ಆನ್ ಮಾಡಿ ನೋಡುವ ಎಂದು ಧೈರ್ಯ ತಂದುಕೊಂಡು ರೊಬೊ ಸಮೀಪಿಸಿದ. ಒಬ್ಬಳು ಸುಂದರ ಯುವತಿಯ ಹತ್ತಿರ ಹೋದಂತೆಯೇ ಭಾಸವಾಯಿತು!

ಮೆಲ್ಲನೆ ಎಡ ಕಿವಿಯ ಹಿಂದೆ, ದೇಹದ ಒಂದು ಭಾಗವೇ ಎಂದು ಭ್ರಮೆ ಬರುವ ಜಾಗದಲ್ಲಿ ಮೃದುವಾಗಿ ಒತ್ತಿದ. ಅದಕ್ಕೆ ನೋವಾಗುವುದೇನೋ ಎಂಬ ಭ್ರಮೆಯಾಯಿತು. ಹಾಗೆಯೇ ಇದ್ದವು ಅದರ ದೇಹದ ಭಾಗಗಳು. ಸ್ವಿಚ್ ಒತ್ತಿ ಹಿಂದೆ ಸರಿದು ಅದರ ಮುಖವನ್ನು ನೋಡಿದ. ಏನೂ ಬದಲಾವಣೆ ಕಾಣಲಿಲ್ಲ! ತಾನೇನಾದರೂ ತಪ್ಪು ಮಾಡಿದೆನೋ? ಇಲ್ಲ, ಇದರಲ್ಲೇನಾದರೂ ದೋಷವಿದೆಯೋ? ಮನು ಗಲಿಬಿಲಿಗೊಂಡ.

ಅಷ್ಟರಲ್ಲಿ ರೊಬೊ ಕಣ್ಣುಗಳಲ್ಲಿ ಕಾಂತಿ ಕಂಡಿತು. ತುಟಿಗಳು ಅದುರಿದವು.

'ನನ್ನನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಧನ್ಯವಾದಗಳು. ನಿಮ್ಮೊಂದಿಗೆ ಸಂಭಾಷಿಸುವ ಭಾಷೆಯನ್ನು ಹೇಳಿ.'

ಮನು ತನ್ನ ಕೇಳಿದ್ದನ್ನು ನಂಬಲಿಲ್ಲ! ಮೈಚಿವುಟಿಕೊಂಡು ನೋಡಿದ. ಆ ರೊಬೊ ಸಂಪೂರ್ಣ ಮಾನವಳಾಗಿ ಪರಿವರ್ತನೆಯಾಗಿತ್ತು! ಇದು ಸಾಧ್ಯವೆ?... ಯಾಕೆ ಸಾಧ್ಯವಿಲ್ಲ?...